ಮಕ್ಕಳಿಗಾಗಿ ಬೈಬಲ್
ಅರ್ಪಿಸುವ

# 5000 ಜನರಿಗೆ ಯೇಸುವು ಊಟವನ್ನು ಕೊಟ್ಟರು



ಬರಹಗಾರರು: Edward Hughes

ಚಿತ್ರಲೇಖಕರು: Janie Forest

ಅಳವಡಿಸುವವರು: Ruth Klassen

ಪದ್ಮಾ ಸೈಲೇಸ್: Vinay Shirol

ತಯಾರಕರು: Bible for Children
www.M1914.org

©2014 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.

ಅನೇಕ ಧರ್ಮದ ನಾಯಕರು (ಪರಿಸಾಯರು) ಯೇಸುವನ್ನು ಸುಳ್ಳುಗಾರನೆಂದು ಹೇಳಿದರು, ಇನ್ನೂ ಕೆಲವರು ಅವನನ್ನು ಕೊಲ್ಲಲು ಪ್ರಯತ್ನಿಸಿದರು.



ಅವರು ದೇವರ ಮಗನೆಂದು ನಂಬಲಿಲ್ಲ, ಮತ್ತು ದೇವರ ಮಗನಿಂದ
ಆಗುವಂತ ಆದ್ಭುತಗಳನ್ನು ಸಹಾ
ಅವರು ನಂಬಲಿಲ್ಲ.



ಯೇಸುವು ಅವನ ಹಿಂದೆ ಇರುವಂತ ಆ ಗುಂಪಿನಿಂದ ಹೊರಟು ಗಲೀಲಯ ಸಮುದ್ರವನ್ನು ದಾಟಿದನು. ಯೇಸುವು ಅದ್ಬುತವನ್ನು ಮಾಡುತ್ತಾನೆಂದು ತಿಳಿದು ಅವನ ಸಂಗಡ ಇರಲು ಬಯಸಿ ಅವನ್ನು ಹುಡಿಕಿ ಕಂಡುಕೊಂಡರು.



ಯೇಸುವು ಕಲಿಸುವಂತ ಸ್ಥಳವಾದ ಬೆಟ್ಟದ ತಪ್ಪಲಿಗೆ ಶಿಷ್ಯರೊಂದಿಗೆ ಹೋದನು ಅಲ್ಲಿ ಜನರು ಬಂದು ಬಂದು ಕೂಡುತ್ತಿದ್ದರು. ಆಗ ಮಧ್ಯಾಹ್ನವಾಗಿತ್ತು. ಹೆಚ್ಚು ಕಡಿಮೆ ಎಲ್ಲರಿಗೂ ಹಸಿವಾಗುವಂತ ಸಮಯ.



ಯೇಸು ಆ ಗುಂಪನ್ನು ನೋಡಿ, ಇವರಿಗೆ ಎಲ್ಲಿಂದ ಊಟವನ್ನು ತರುವುದು ಎಂದು ಫಿಲಿಪ್ಪನನ್ನು ಕೇಳಿದನು. ಅಲ್ಲಿ ಆಹಾರವನ್ನು ಶೇಖರಿಸಿಡುವಂತ ಯಾವ್ರೂದೆ ಅಂಗಡಿ ಇರಲಿಲ್ಲ. ಆಗ ಯೇಸು ಏನನ್ನು ಮಾಡಲು ಯೋಚಿಸಿರಬಹುದು?



‘ನಾವು ಇವರಿಗೆ ಊಟ ಕೊಡಲು ತುಂಬಾ ಹಣ ಬೇಕಾಗುವುದು’ ಎಂದು ಫಿಲಿಪ್ಪನು ಉತ್ತರಿಸಿದನು. ಯೇಸುವಿನ ಶಿಷ್ಯರ ಹತ್ತಿರ ಅಷ್ಟು ಹಣ ಇರಲಿಲ್ಲ.





ಇಲ್ಲಿರುವ ಒಬ್ಬ ಹುಡುಗನ
ಬಳಿಯಲ್ಲಿ ಐದು ರೊಟ್ಟಿ ಮತ್ತು
ಎರಡು ಮೀನುಗಳಿವೆ ಎಂದು
ಮತ್ತೊಬ್ಬ ಶಿಷ್ಯನಾದ ಆಂದ್ರೆಯನು
(ಸಿಮೋನ್ ಪೇತ್ರನ ಸಹೋದರ)
ಯೇಸುವಿಗೆ ಹೇಳಿದನು.

ಇಷ್ಟು ಜನರಿರುವಾಗ ಅವುಗಳಿಂದ ಏನನ್ನು ಮಾಡಬಹುದು? ಆ ಸಣ್ಣ ಹುಡುಗ ತಂದಿರುವ ಆಹಾರವನ್ನು ಯೇಸುವಿಗೆ ಕೊಡಲು ಬಯಸಿದನು. ಆ ಸಲ್ಪ ಆಹಾರದಿಂದ ಇಷ್ಟು ಜನರು ಉಣ್ಣುವವರೆಂದು ಆಂದ್ರೆಯನು ತಿಳಿಯಲಿಲ್ಲ.



ಯೇಸು ಅವರಿಗೆ ಸಾಲಗಿ ಕೂತುಕೊಳ್ಳಿರಿ ಅಂದನು ಹೆಂಗಸರನ್ನು ಮತ್ತು ಮಕ್ಕಳನ್ನು ಬಿಟ್ಟು ಕೂತುಕೊಂಡ ಗಂಡಸರ ಲೆಕ್ಕವೇ ಸಮಾರು ೫೦೦೦ ಜನರು.



ಯೇಸುವು ಆ ರೊಟ್ಟಿ ಮತ್ತು ಮೀನನ್ನು
ತೆಗೆದುಕೊಂಡರು, ಆ ಹುಡುಗನು
ಯೇಸುವಿನ ಮೇಲೆ ಬರವಸೆಯನ್ನಿಟ್ಟಿದ್ದನು,
ಯೇಸುವಿಗೆ ಆತನ ಆಹಾರ ಬೇಕೆಂದು
ಅವನಿಗೆ ತಿಳಿದಿರಲಿಲ್ಲ ಆಥಾವ
ಅದರಿಂದ ಏನನ್ನು
ಮಾಡುತ್ತಾನೆಂದು
ಅವನಿಗೆ
ಗೊತ್ತಿರಲಿಲ್ಲ.



ಒಂದು ವೇಳೆ ಈ ಊಟವನ್ನು ಯೇಸುವಿಗೆ ಕೊಟ್ಟರೆ ನನಗೆ ಇಲ್ಲದಾಗಬಹುದೆಂದು ಆಲೋಚಿಸಿರಬಹುದು. ಆದರೆ ಏನೇ ಆಗಲಿ ಅವನು ಊಟವನ್ನು ಯೇಸುವಿಗೆ ಕೊಟ್ಟನು.



ಯೇಸುವು ಆ ಐದು ರೊಟ್ಟಿ ಮತ್ತು
ಎರಡು ಮೀನನ್ನು ತೆಗೆದುಕೊಂಡು
ದೇವರಿಗೆ ಸ್ತೋತ್ರವನ್ನು ಮಾಡಿ,
ಈ ಆಹಾರವನ್ನು
ಆಶೀರ್ವಾದಿಸುವಂತೆ
ಪ್ರಾರ್ಥಿಸಿದರು.



ಯೇಸು ಪ್ರಾರ್ಥಿಸಿದ ನಂತರ ಆ ರೊಟ್ಟಿ
ಮತ್ತು ಮೀನನ್ನು ಮುರಿದು ಅಲ್ಲಿರುವಂತ
ಶಿಷ್ಯರಿಗೆ ಕೊಟ್ಟನು ಅವರು ಅದನ್ನು
ಅಲ್ಲಿರುವಂತ ಆ ದೊಡ್ಡ ಜನರ ಗುಂಪಿಗೆ
ಹಂಚಿದರು. ಯೇಸು ಅದ್ಭುತವನ್ನು
ಮಾಡಿದರು ಅಲ್ಲಿರುವಂತ ಎಲ್ಲರು
ತೃಪ್ತಿಯಾಗಿ ಊಟವನ್ನು ಮಾಡಿದರು
ಯಾರಿಗೂ ಕಡಿಮೆಯಾಗಲಿಲ್ಲ.



ಎಲ್ಲರು ಊಟಮಾಡಿದ ನಂತರ ಇನ್ನೂ ಸಮಾರು ರೋಟ್ಟಿ ಮತ್ತು ಮೀನಿನ ತುಂಡುಗಳು ಉಳಿದವು. ಅಲ್ಲಿರುವ ಮೀನಿನ ಮತ್ತು ರೋಟ್ಟಿಯ ತುಂಡುಗಳನ್ನು ಕೂಡಿಸಿದಾಗ ಹನ್ನೆರೆಡು ಪುಟ್ಟಿಗಳು ತುಂಬಿದವು.



ಆ ದಿನ ಆ ಸಣ್ಣ ಹುಡುಗ ತಂದಿರುವ ಊಟದಿಂದ ೫೦೦೦ ಜನರಿಗೆ ಯೇಸುವು ಊಟವನ್ನು ಕೊಟ್ಟರು ಮತ್ತೊಂದು ಸಮಯದಲ್ಲಿ ಏಳು ರೋಟ್ಟಿ ಮತ್ತು ಕೆಲವು ಮೀನುಗಳಿಂದ ೪೦೦೦ ಜನರಿಗೆ ಊಟವನ್ನು ಕೊಟ್ಟರು.



ಜನರು ಈ ತರವಾದ ಕಾರ್ಯವನ್ನು ನೋಡುವಾಗ ಪರಿಸಾಯರ ಹಾಗೆ ಕೋಪವನ್ನು ಮಾಡಿಕೊಳ್ಳದೆ, ಈತನು ನಿಜವಾಗಿಯು ಲೋಕಕ್ಕೆ ಬರಬೇಕಾದ ಪ್ರವಾದಿ ಎಂದು ಹೇಳಿದರು, ಮತ್ತು ಅವರು ಈತನೇ ದೇವರ ಪರಿಶುದ್ಧ ಲೋಕದಿಂದ ಬರಬೇಕಾಗಿರುವ ರಕ್ಷಕನು ಎಂದು ತಿಳಿದರು.



# 5000 ಜನರಿಗೆ ಯೇಸುವು ಊಟವನ್ನು ಕೊಟ್ಟರು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ಯೋಹಾನ 6

"ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು."
ಕೀರ್ತನೆ 119:130

ಮುಕ್ತಾಯ

ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು. ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು!
ಯೋಹಾನ 3:16